# ತನುಮನ ತಣಿಸುವ ತವಾಂಗ್



ಬುಮ್‌ಲಾ – ಶೂನ್ಯ ಪ್ರದೇಶ


**ಈಶಾನ್ಯ ರಾಜ್ಯಗಳ ಸ್ವರ್ಗಸದೃಶ ಪ್ರಕೃತಿ, ವಿಶಿಷ್ಟ ಸಂಸ್ಕೃತಿಯನ್ನು ಬಿಂಬಿಸುವ ತವಾಂಗ್, ಭಾರತ– ಚೀನಾ ನಡುವಣ ಕುದಿಬಿಂದುವೂ ಹೌದು.**

**■ ಕೆ.ಆರ್. ಉಮಾದೇವಿ ಉರಾಳ**
ಚಿತ್ರ: ಕೆ.ಎನ್.ಉರಾಳ್

ಈಶಾನ್ಯದ ರಾಜ್ಯಗಳಲ್ಲಿ ಅರುಣಾಚಲ ಪ್ರದೇಶದ್ದು ವಿಶಿಷ್ಟ ಸೌಂದರ್ಯ. ಭೂತಾನ್, ಮ್ಯಾನ್ಮಾರ್ ಮತ್ತು ಚೀನಾದೊಂದಿಗೆ ಗಡಿ ಹಂಚಿಕೊಂಡಿರುವ ಈ ರಾಜ್ಯದ ಬಹುಮುಖ್ಯ ಜಿಲ್ಲಾ ಕೇಂದ್ರ ತವಾಂಗ್. ಜನಸಂಖ್ಯೆಯ ಐದನೇ ಎರಡು ಭಾಗದಷ್ಟು ಜನ ತವಾಂಗ್‌ನಲ್ಲೇ ವಾಸಿಸುತ್ತಾರೆ. ಜನಸಂಖ್ಯೆಯ ಮುಕ್ಕಾಲು ಭಾಗ ಬುಡಕಟ್ಟು ಜನರು. ಮೋಂಪಾ ಜನಾಂಗದವರೇ ಅಧಿಕ. ಭೂತಾನ್, ಟಿಬೆಟ್‌ನಿಂದ ಬಂದು ನೆಲೆಸಿದವರೂ ಸಾಕಷ್ಟಿದ್ದಾರೆ.

ತವಾಂಗ್ ತಲುಪುವ ಪ್ರಯಾಣವೂ ಅತ್ಯಂತ ರೋಚಕ. ಇಲ್ಲಿಗೆ ಬರಲು ಅಸ್ಸಾಮಿನ ತೇಜ್‌ಪುರವೇ ಹೆಬ್ಬಾಗಿಲು. ತೇಜ್‌ಪುರ ವಿಮಾನ ನಿಲ್ದಾಣದಿಂದ ತವಾಂಗ್‌ಗೆ 320 ಕಿ.ಮೀ. ರಸ್ತೆ ಪ್ರಯಾಣ ಅನಿವಾರ್ಯ. ತೇಜ್‌ಪುರದಿಂದ ಹೆಲಿಕಾಪ್ಟರ್ ಸೌಲಭ್ಯವೂ ಇದೆ. ತೇಜ್‌ಪುರದಿಂದ ಅರುಣಾಚಲ ಪ್ರದೇಶದ ವೆಸ್ಟ್‌ಕಾಮೆಂಗ್ ಜಿಲ್ಲೆಯ ಬಲೂಕಾ ಪಾಂಗ್ ತಲುಪುವವರೆಗಿನ ಪ್ರಯಾಣದ್ದು ಒಂದು ಹಂತ. ಇಲ್ಲಿ ಬಯಲು ಭೂಮಿಯ ಉತ್ತಮ ರಸ್ತೆ ಇದೆ. ಮುಂದೆ ತವಾಂಗ್ ಜಿಲ್ಲೆಯ ಗಡಿಯಲ್ಲಿರುವ ಸೆಲಾ ಪಾಸ್‌ಗೆ ಬರುವವರೆಗಿನದು ಪ್ರಯಾಣದ ಎರಡನೇ ಹಂತ. ಎದುರಲ್ಲಿ ಹಿಮಾಲಯದ ಸರಣಿ ಶಿಖರಗಳು. ದಟ್ಟ ಮೋಡ ರಾಶಿ, ನದಿ ಕಣಿವೆಗಳು, ಕಣಿವೆಗಳಲ್ಲಿ ಸೂಚಿಪರ್ಣ ಮರಗಳು. ದಾರಿಯುದ್ದಕ್ಕೂ 'ಶೂಟಿಂಗ್ ಸ್ಟೋನ್ ಏರಿಯಾ', 'ಧೀರೇ ಚಲೀಯೇ' ಎಂಬೆಲ್ಲ ಫಲಕಗಳು. ಧೂಳೆಬ್ಬಿಸಿ ಸಾಗುವ ವಾಹನಗಳು, ಧುತ್ತನೆ ಎದುರಾಗುವ ಜಲಪಾತಗಳು, ಝರಿಗಳು, ಹಳ್ಳಗಳು. ಎತ್ತರದ ಬೆಟ್ಟಗಳ ತಬ್ಬಿ ನಿಂತ ಪುಟ್ಟ ಮನೆಗಳು– ಒಟ್ಟಾರೆ ಮನಮೋಹಕ ನೋಟ.

ಸೆಲಾಪಾಸ್ ಬಂದಾಗ ಪ್ರಯಾಣದ ಮೂರನೇ ಹಂತ ಆರಂಭ. ಸೆಲಾ ಕಣಿವೆಯ ರಸ್ತೆ, ತವಾಂಗಿನ ಉಳಿದೆಡೆಗೆ ಸಂಪರ್ಕಿಸುವ ಏಕೈಕ ಕೊಂಡಿ. ಪರ್ವತ ಪ್ರದೇಶದಲ್ಲಿ ರಸ್ತೆ ಪ್ರಯಾಣದ ಮೂಲಕ ತಲುಪಬಹುದಾದ ಪ್ರಪಂಚದ ಎರಡನೇ ಅತಿ ಎತ್ತರದ ಭೂ ಶಿಖರವಿದು. ಎಲ್ಲೆಡೆಗೂ ದಟ್ಟ ಹಿಮಪದರ. ಬಾರ್ಡರ್ ರೋಡ್ ಆರ್ಗನೈಸೇಷನ್‌ಗೆ ಇಲ್ಲಿ ರಸ್ತೆ ನಿರ್ವಹಣೆಯ ಹೊಣೆ. ನಾವು ಹೋದಾಗ ಸೆಲಾ ಸರೋವರ ಚಳಿಗೆ ಹೆಪ್ಪುಗಟ್ಟಿತ್ತು.



ವಿನ್ಯಾಸ: ದಿಲ್